## ರುದ್ರನಾಗ ಈಗ ಹಲ್ಲುಕಿತ್ತ ನಾಗ!

ರುದ್ರನಾಗ ಈಗ ಆತುರದಿಂದ ಎಲ್ಲಾ ಕಡೆ ಹುಡುಕಾಡಿದ. ಇಲ್ಲ... ತಂಗಿ ಮತ್ತು ಅವಳ ಗಂಡ ಮನೆಯಲ್ಲಿ ಇರಲಿಲ್ಲ. ರುದ್ರನಾಗ ಕೋಪದಿಂದ ಹಲ್ಲು ಕಡಿಯುತ್ತಿದ್ದಾನೆ. ಅವನೇಕೆ ಈ ರೀತಿ ಮಾಡಿದ ಎಂದು ಗೊತ್ತಾಗುತ್ತಿಲ್ಲ. ಕೋಪ ಉಕ್ಕೇರುತ್ತಿದೆ. ಮದಂತ ಈಗ ಹತ್ತಿರ ಬಂದು ತನ್ನ ಹತ್ತಿರ ಇದ್ದ ಮಗುವಿನ ಬಗ್ಗೆ ಹೇಳಿದ. ತೋಳ ಎತ್ತಿಕೊಂಡು ಬಂದ ಮಗು. ರುದ್ರನಾಗ ಕತ್ತನ್ನು ಹೊರಳಿಸಿದ. ಮುದ್ದಾದ ಹೆಣ್ಣು ಮಗು. ತಂಗಿಯ ಹೋಲಿಕೆ ಮಗುವಿನಲ್ಲಿದೆ. ರುದ್ರನಾಗ ನಡೆದಿರುವುದನ್ನು ಊಹಿಸುತ್ತಿದ್ದಾನೆ. ನೆತ್ತಿಯಿಂದ ಅಂಗಾಲಿನ ತನಕ ಕಂಪನ ಉಂಟಾಗುತ್ತಿವೆ. ಕೋಪ, ಆವೇಶದ ಪರಾಕಾಷ್ಠೆ.

ತಂಗಿಯ ಮಗುವನ್ನು ಜೋಪಾನವಾಗಿ ನೋಡಿಕೊಳ್ಳಲು ಹೇಳಿ ರುದ್ರನಾಗ ಹೊರಟ. ಒಂದು ಗಂಟೆ ತಿರುಗಾಡಿದ. ಅಲ್ಲಿ ಕಂಡಿತು ಕಾರು. ರಸ್ತೆಯಲ್ಲಿ ಉರುಳಿಕೊಂಡಿರುವ ಮರ... ಹುಲ್ಲಿನ ಮೇಲೆ ರಕ್ತದ ಪಸೆ. ಅರ್ಥವಾಗಿ ಹೋಯಿತು ರುದ್ರನಾಗನಿಗೆ. ಜೋಡಿಹಕ್ಕಿಗಳು ಹಾರಿ ಹೋಗಿವೆ. ಅಂದರೆ ಮನೋಹರ ತನ್ನ ಹೆಂಡತಿಯನ್ನೂ ಕರೆದುಕೊಂಡು ಹೋಗಿದ್ದಾನೆ!

ಈ ಮೋಸದಲ್ಲಿ ತಂಗಿ ಅರುಂಧತಿ ಸಹ ಸೇರಿಕೊಂಡಿದ್ದಾಳೆ. ಇಲ್ಲದಿದ್ದರೆ ಇಂತಹ ಪರಿಸ್ಥಿತಿಯಲ್ಲಿ ಅವಳು ಹೇಳದೆ ಕೇಳದೆ ಕದ್ದು ಹೋಗುತ್ತಿರಲಿಲ್ಲ. ಮೋಸದಲ್ಲಿ ಗಂಡಹೆಂಡತಿಯ ಪಾತ್ರ ಇದೆ. ಇದು ನಿಜವಾಗಿಯೂ ಸಹ ಅರುಂಧತಿಯ ದುರದೃಷ್ಟ. ಯಾಕೆ ಎಂದರೆ ಅವಳ ಅಣ್ಣ ಅವಳನ್ನು ತಪ್ಪು ತಿಳಿದುಕೊಂಡಿದ್ದ.

* * *

'ಎಲ್ಲಿ... ನನ್ನ ಮಗು?' ಕಣ್ಣುಗಳನ್ನು ತೆರೆದ ಕೂಡಲೇ ಅರುಂಧತಿ ಕೇಳಿದ ಮೊದಲ ಪ್ರಶ್ನೆಯೇ ಇದು. ಮನೋಹರ ಅಳುತ್ತಿದ್ದಾನೆ. ಉತ್ತರಿಸಲಾಗುತ್ತಿಲ್ಲ ಅವನಿಂದ. ದುಃಖ... ಅದರೊಂದಿಗೆ ಭಯ. ಇನ್ನೇನೋ ಆಗಿತ್ತು. ಈ ವಾಮಾಚಾರ... ದೆವ್ವ, ಭೂತ ಎಲ್ಲಾ ಸುಳ್ಳು ಎಂದು ಉದಾಸೀನದಿಂದ, ಉಡಾಫೆಯಿಂದ ತುಂಗಮ್ಮ ಮತ್ತು ಅವಳ ಮಕ್ಕಳ ಉಗುರು, ಕೂದಲು ಮತ್ತು ಹೆಜ್ಜೆ ಮಣ್ಣು ನೀಡಿದ್ದನು.

ಸುಳ್ಳು ಹೇಳಿ ಹೆಂಡತಿಯ ಅಣ್ಣನಿಂದ ಕೈಕರಣವನ್ನು ಮಾಡಿಸಿದ್ದನು. ಗೋರ ರೀತಿಯ ಸಾವು! ಸತ್ಯ ತಿಳಿಯುತ್ತದೆ. ಬಿಡಲಾರ... ರುದ್ರನಾಗ ಬಿಡಲಾರ... ನಾನು ಎಲ್ಲೇ ಅಡಗಿದ್ದರೂ ಸೇಡು ತೀರಿಸಿಕೊಳ್ಳುತ್ತಾನೆ! ನನ್ನ ಮೇಲೆ ಕ್ರೂರ ಶಕ್ತಿಯನ್ನು ನಾಳೆ ರಾತ್ರಿಯೇ ಪ್ರಯೋಗಿಸುತ್ತಾನೆ. ಇದನ್ನು... ನಡೆದಿರುವುದನ್ನು ಹೆಂಡತಿಗೆ ಹೇಳಲು ಮನಸ್ಸು ಬರುತ್ತಿಲ್ಲ.

ಅವಳು ಮಗವನ್ನು ಕಳೆದುಕೊಂಡು ಹುಚ್ಚು ಹಿಡಿದವಳಂತೆ ಅಳುತ್ತಿದ್ದಾಳೆ. ಅರುಂಧತಿ ಜ್ವರದ ತಾಪದಿಂದ ಬಡಬಡಿಸುತ್ತಾ ``ಮಗು... ತೋಳ ಬಂತು ತೋಳ... ಮಗೂನಾ ತೋಳ ಎತ್ತಿಕೊಂಡು ಹೋಯಿತು...''

ಅವಳಿಗೆ ಇಂಜೆಕ್ಷನ್ ನೀಡಿದರು. ಅರುಂಧತಿ ಈಗ ನಿದ್ದೆ ಮಾಡುತ್ತಿದ್ದಾಳೆ. ಮನೋಹರ ಭಯಗೊಂಡಿದ್ದಾನೆ. ಗಾಬರಿ... ಆತಂಕ. ಮನೋಹರ ಅಂದುಕೊಂಡನು. ರುದ್ರನಾಗ ನನ್ನ ಮೇಲೆ ಪ್ರಯೋಗ ಮಾಡಲು ಸಿದ್ಧತೆ

